ಶ್ರೀ ಸಿ. ಆರ್. ರಂಗೇಗೌಡ.—ಈಗ ಸರಿಕಲ್ಯರ್ ಇರಾಖೆಯಲ್ಲಿ ಸರಿಕಲ್ಯರ್ ಕೆಲಸ ಖಂಡಿತ ವಾಗಿದೆ ಎಂದು ಕೋರ್ಟಾರ ಹಿತ್ಲೆಯ ಅನೇಕ ರೈತರು ಸರಕಾರಕ್ಕೆ ಮನವಿ ಮಾಡಿರುವುದು ನಿಜವೇ ?

ಶ್ರೀ ಆರ್. ದಯಾನಂದ ಸಾಗರ್.—ರೈತರು ಅರೀತಿ ಮನವಿ ಮಾಡಿಲ್ಲ.

ಶ್ರೀ ಸಿ. ಆರ್. ರಂಗೇಗೌಡ.—ಫಿಲೇಚರಿನಲ್ಲಿ ಆಗಾಗ್ಗೆ ನಷ್ಟವಾಗುತ್ತಾ ಇರುವುದರಿಂದ, ಏಕೆ ಹಾಗೆ ನಷ್ಟವಾಗುತ್ತಿದೆ ಎಂದು ತನಿಖೆ ನಡೆಸಿ ಅದು ಯಶಸ್ವಿಯಾಗಿ ನಡೆಯುವಂತೆ ಸಲಹೆ ಕೊಡಲು ಒಂದು ತಜ್ಞರ ಸಮಿತಿಯನ್ನು ನೇಮಕ ಮಾಡುತ್ತೀರಾ ?

ಶ್ರೀ ಆರ್. ದಯಾನಂದ ಸಾಗರ್.—ಒಂದು ಸಮಿತಿ ನೇಮಕ ಮಾಡುವ ವಿಚಾರದಲ್ಲಿ ಸರಕಾರ ಯೋಚನೆ ಮಾಡುತ್ತಾ ಇದೆ.

Payment of Compensation to the lands acquired for formation of certain ayacut roads under Tunga Bhadra Project of Bellary side low level canal.

*Q.—984. **Sri C. M. REVANASIDDAIAH** (Siruguppa).—

Will the Government be pleased to state :—

(*a*) whether it is a fact that no compensation has been paid to the lands acquired for formation of certain ayacut roads under the Thunga Bhadra Project of the Bellary side low level canal so far ;

(*b*) whether it is a fact that the Hon'ble Chief Minister while he was at Vaikunta on 13th May 1963 has promised to arrange for payment of compensation early ;

(*c*) if so, how long it will take to pay the same ?

A.—**Sri S. NIJALINGAPPA** (Chief Minister).—

(*a*) Yes.

(*b*) No.

(*c*) As the beneficiaries had agreed to part with their lands free of cost for the formation of these Roads, the question of payment of compensation does not arire.

ಶ್ರೀ ಸಿ. ಎಂ. ರೇವಣಸಿದ್ದಯ್ಯ.—(ಇ)ಗೆ ಉತ್ತರವಾಗಿ ಹಿಡುವಳಿದಾರರು ಒಪ್ಪಿಗೆ ಕೊಟ್ಟಿದ್ದಾರೆಂದು ಹೇಳಿದ್ದಾರೆ. ಒಪ್ಪಿಗೆಯನ್ನು ಕೂಟ್ಟಿರುವುದು ರಿಜಿಸ್ಟರ್ ಮೂಲಕವೋ ಅಥವಾ ಒಪ್ಪಿಗೆ ಪತ್ರದ ಮೂಲಕವೋ ಅಥವಾ ಬರೀ ಬಾಯಿ ಮಾತಿನಲ್ಲಿಯೋ ಹೇಳುತ್ತೀರಾ ಸ್ವಾಮಿ ?

†ಶ್ರೀ ಎಸ್. ನಿಜಲಿಂಗಪ್ಪ.—ಅವರು ದೊಡ್ಡ ಮನುಷ್ಯರು, ಕೊಡುತ್ತೇವೆಂದು ಹೇಳಿದ್ದಾರೆ, ಬಹಳ ಜನ ಕೊಟ್ಟಿದ್ದಾರೆ.

ಶ್ರೀ ಸಿ. ಎಂ. ರೇವಣಸಿದ್ದಯ್ಯ.—ಮಾನ್ಯ ಮಂತ್ರಿಗಳು ಹೇಳುವುದನ್ನು ನೋಡಿದರೆ ಅದನ್ನು ಬರಹದಲ್ಲಿ ತೆಗೆದುಕೊಂಡಿಲ್ಲವೆಂದು ಅರ್ಥವಾಗುತ್ತದೆಯಲ್ಲವೇ ಸ್ವಾಮಿ ?

ಶ್ರೀ ಎಸ್. ನಿಜಲಿಂಗಪ್ಪ.—ಬರವಣಿಗೆಯಲ್ಲಿ ಕೊಟ್ಟಿದ್ದಾರೆಯೇ ಇಲ್ಲವೇ ಎನ್ನುವ ವಿಚಾರ ಫೈಲಿನಲ್ಲಿಲ್ಲ. ನಾನು ಹೋದಾಗ ಹೇಳಿದ್ದಾರೆ. ಒಬ್ಬಿಬ್ಬರು ತಕರಾರು ಮಾಡಿದರು, ಅವರಿಗೆ ಬುದ್ಧಿ ಹೇಳಿ ನಿಮಗೇ ಅನುಕೂಲವಾಗುತ್ತದೆ, ಬಿಟ್ಟುಕೊಡಿ ಎಂದು ಹೇಳಿದೆ.

ಶ್ರೀ ಸಿ. ಎಂ. ರೇವಣಸಿದ್ದಯ್ಯ.—ರಸ್ತೆ ಮಾಡಲು ಜಮೀನನ್ನು ಕಳೆದುಕೊಂಡಿರುವವರು ಬಹಳ ಬಡವರು. ಅವರು ಮಾತ್ರ ಬಿಟ್ಟುಕೊಟ್ಟಿದ್ದಾರೆ, ಶ್ರೀ ಎಂತರು ಬಿಟ್ಟುಕೊಟ್ಟಿಲ್ಲ ಮತ್ತು ಅವರು ಕಟ್ಟಲೆ ಹಾಕಿ ಕೆಲಸಕ್ಕೆ ಅಡ್ಡಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಕಟ್ಟಲೆ ಹಾಕಿರುವುದು ಗೊತ್ತಿಲ್ಲ. ರಿಕಾರ್ಡಿನಲ್ಲಿ ಒಂಭತ್ತು ಜನ ತಕರಾರು ಮಾಡಿದ್ದಾರೆ ಎಂದು ಇವೆ. ನೂರಾರು ಜನ ಕೊಟ್ಟಿದ್ದಾರೆ. ಕೊಡದೆ ಇರುವವರಿಗೂ ಹಾಗೆ ಮಾಡಬಾರದೆಂದು ಬುದ್ಧಿ ಹೇಳಿದ್ದೇವೆ. ಅವರು ಬಡವರೋ ಶ್ರೀಮಂತರೋ ಗೊತ್ತಿಲ್ಲ.

ಶ್ರೀ ಪಿ. ಎಂ. ರೇವಣಸಿದ್ಧಯ್ಯ.—ಇದೇ ನಮೂನೆ ರಸ್ತೆಗಳನ್ನು ತುಂಗಭದ್ರ ಅಣೆಕಟ್ಟು ಪ್ರದೇಶದಲ್ಲಿ ರಾಯಭೋಗವನ್ನಲ್ಲಿ ಮಾಡಿಸುವುದಕ್ಕೆ ಸರ್ಕಾರವು ಹಿಂದುಳಿದವರಿಗೆ ದುಡ್ಡು ಕೊಟ್ಟಿರುವುದು ನಿಜವಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಇನ್ನೊಂದು ಪ್ರಶ್ನೆಯನ್ನು ಕೇಳಿದರೆ ಉತ್ತರ ಹೇಳುತ್ತೇನೆ.

Distribution of Sugar in the State.

*Q. —992. Sri N. O. SAMAJI.— (Belgaum-II)

Will the Government be pleased to state :—

(*a*) whether they are aware that sugar is not being supplied equally as between rural and urban areas in the State :—

(*b*) if so, whether they intend to take necessary action to distribute the same equally ?

A.—Sri M. V. KRISHNAPPA (Minister for Revenue).—

(*a*) Yes.
(*b*) No.

Sri N. O. SAMAJI.— (Marathi)

Mr. SPEAKER.—I think this Question of distribution of sugar was discussed though another question some time back and plenty of supplementaries were allowed because this Matter was agitating the mind of the public.

Sri N. O. SAMAJI.— (Marathi)

Sri M. V. KRISHNAPPA.—Sir, the people residing in rural area, eat less sugar and therefore we are distributing less sugar to rural areas.

Sri N. O. SAMAJI (Marathi).—

Sri M. V. KRISHNAPPA.—Sir, the demand in the rural parts and the long previous experience and practice when rationing was there all taken into consideration. The All-India Sugar Board has decided that the people in the rural part eat on an average half a lb. of sugar and people in the cities 1½ lbs. That is the basis on which it is distributed wherever there is Rationing. In Mysore, there is no Rationing except in Belgaum. There, in one or two places they are issuing indentity cards and where indentity cards are issued sugar is distributed in that way. In other places, sugar is sold in all shops and societies and anybody may go and buy any quantity.

Sri L. B. BIRJE.— (Marathi)

ಶ್ರೀ ಎಂ. ವಿ. ಕೃಷ್ಣಪ್ಪ.—ಸಮಾಜವಾದಕ್ಕೂ ಸಕ್ಕರೆ ಹಂಚುವುದಕ್ಕೂ ಏನೂ ಸಂಬಂಧವಿಲ್ಲ. ಸಮಾಜವಾದದ ಅರ್ಥದಲ್ಲಿ ಸಕ್ಕರೆಯನ್ನು ಹಂಚುವುದಕ್ಕೆ ಹೋದರೆ ಸಕ್ಕರೆ ರೋಗವಿರುವವರಿಗೂ ಸಕ್ಕರೆ ಕೊಡಬೇಕಾಗುತ್ತದೆ; ಅವನಿಗೆ ಬೇಕಾಗಿರಲಿ, ಬೇಡವಾಗಲಿ, ಕೊಡಬೇಕಾಗುತ್ತದೆ. ಯಾರು ಸಕ್ಕರೆ ತಿನ್ನುತ್ತಾರೆಯೋ ಅವರಿಗೆ ಕೊಡುವುದು ನ್ಯಾಯ. ಯಾರಿಗೆ ಎಷ್ಟು ಬೇಕೋ ಅಷ್ಟನ್ನು ಕೊಡುವುದು ನ್ಯಾಯ. ಅದು ಸಮಾಜವಾದ. ಆ ದೃಷ್ಟಿಯಿಂದ ಹಂಚುತ್ತಿದ್ದೇವೆ.